ವಿ. ಹೇಮಂತಕುಮಾರ, ಬೆಂಗಳೂರು
- ಥಟ್ ಅಂತ ಕೇಳಿದರೆ ಮೂರ್‍ನಾಲ್ಕು ತಿಂಗಳುಗಳ ನಂತರ ಉತ್ತರಿಸುವಿರಲ್ಲ ರಾಮ್‌ಜಿ...?



ಹೇಮಂತದಲ್ಲಿ ಕಳುಹಿಸಿದ ಟಪಾಲು ನನ್ನನ್ನು ತಲುಪಲು ಶಿಶಿರವಾಗಿರುತ್ತದಲ್ಲ!

ನೀಲಮ್ಮ ಕುಮಾರಪ್ಪ, ಲಿಂಗಸುಗೂರು
- ದೊರೆಯೇ ದಾರಿ ತಪ್ಪಿದರೆ ದೂರು ಯಾರಿಗೆ ಕೊಡಬೇಕು?

ದೊರೆಸಾನಿಗೆ. ಯಾರಿಗೂ ಮಣಿಯದವರು ರಮಣಿಗೆ ಮಣಿದಾರು.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
- ನೀರಿಗೆ ಬಣ್ಣವಿಲ್ಲ, ರುಚಿಯಿಲ್ಲ, ವಾಸನೆಯಿಲ್ಲ. ಒಂದು ಪಕ್ಷ ಇವೆಲ್ಲವೂ ಇದ್ದಿದ್ದರೆ?

ಅದನ್ನು ಬೆಂಗಳೂರಿನ ಕೆರೆಯ ನೀರು ಎಂದು ಕರೆಯಲಾಗುತ್ತಿತ್ತು.

ನರಸಿಂಹ ಪೈ, ಕಾಸರಕೋಡ
- ಮಹಿಳೆಯರು ಇಲ್ಲದ ಕ್ಷೇತ್ರ ಯಾವುದು?



ಹೆಣ್ಣಿನ ನೆರವಿಲ್ಲದೆ ಪುರುಷರು ತಾವಾಗಿಯೇ ಬೋಳಿಸಿಕೊಳ್ಳುವ ಮೆನ್ಸ್ ಬ್ಯೂಟಿ ಪಾರ್ಲರ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
- ಮದುವೆಗೆ ಮುಂಚೆ ಸಂತಸ; ಮದುವೆಯ ನಂತರ?

ಸಂತತಿ!

ರವಿ ಎಂ. ಪೈ, ಹೊನ್ನಾವರ
- ಬೆಳಕು ಬಂದೊಡನೆ ಕತ್ತಲು ಓಡುವುದೇಕೆ?

ಬೆಳಕು ಇದ್ದಕ್ಕಿದ್ದಂತೆ ಕೈಕೊಟ್ಟರೆ ತಕ್ಷಣ ಡ್ಯೂಟಿಗೆ ಹಾಜರಾಗುವುದಕ್ಕೆ ತಯಾರಾಗಲು.

ಎ.ಕೆ. ಪಟ್ಟಾಭಿ, ಬೆಂಗಳೂರು
- ಮದುವೆ ಎಂದರೆ ಮಡದಿ, ದುಃಖ ಮತ್ತು ವೆಚ್ಚ ಎನ್ನುತ್ತಾರೆ. ನಿಮ್ಮ ಅನಿಸಿಕೆ ಏನು?

ಆದರೆ ನಿಮ್ಮ ಮಾವನವರು 'ಮಮಡೆಯನಿಗಾಗಿ; ದುದುಂದು; ವೆವೆಚ್ಚ' ಎಂದು ಬರೆದಿದ್ದರಲ್ಲಾ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
- ಈ ರಾಮನನ್ನು ಈ ತನಕ ಯಾವ ಶೂರ್ಪನಖಿಯೂ ಕಾಡಲೇ ಇಲ್ಲವೆ?

ನನ್ನ ಅಂದ ನೋಡಿದ ಶೂರ್ಪನಖಿ 'ಮಾವ ಮಾರೀಚನೇ ವಾಸಿ' ಎನ್ನುತ್ತಾ ಓಡಿಹೋದಳು.

ಮುಕುಂದ ಹೆರಕಲ್ಲ, ಕಲಬುರ್ಗಿ
- ದೂರದರ್ಶನದ ವಾಹಿನಿಗಳಲ್ಲಿ ಭವಿಷ್ಯ ಹೇಳುವವರ ಮಗ್ಗುಲಲ್ಲಿ ಚೆಂದೊಳ್ಳೆ ಚೆಲುವೆಯರು ಇರಲೇಬೇಕೆ?

ಆ ಚೆಲುವೆಯರಿಗೆ ಬೀಳುವವರು ಹೆಚ್ಚು ಇರುವುದರಿಂದಲೇ ಟಿಆರ್‌ಪಿ ಬೀಳದಿರುವುದಂತೆ.

ಎ.ಪಿ. ರಂಗನಾಥ್. ಮೈಸೂರು
ಭಕ್ತನಿಗೂ, ಸದ್ಭಕ್ತನಿಗೂ ಏನು ವ್ಯತ್ಯಾಸ?
- ಮನದಲ್ಲೇ ಪೂಜಿಸುವವನು ಭಕ್ತ; ಧ್ವನಿವರ್ಧಕದಲ್ಲಿ ಪೂಜಿಸುವವನು ಸದ್ ಭಕ್ತ.

ಶಿವಮೊಗ್ಗ ನರಹರಿ, ಬೆಂಗಳೂರು
- ಯಾವ ಕಷ್ಟವನ್ನೂ ಪಡದೆ ಶ್ರೀಮಂತನಾಗುವ ದಾರಿ ಯಾವುದಾದರೂ ಇದೆಯಾ ಸಾರ್?

ಇದೆ. ಸಿರಿವಂತನ ಮನೆಯ ಬೆಕ್ಕೋ, ನಾಯಿಯೋ ಆದರೆ ಸಾಕು!

ಮಹಾವೀರ ಕಾಸರ, ಶಿವಮೊಗ್ಗ
- ಹೆಂಡತಿ ಒಬ್ಬಳಿದ್ದರೆ ಅರ್ಧಾಂಗಿ; ಇಬ್ಬರು ಹೆಂಡತಿಯರಿದ್ದರೆ?

ಅವರಿಬ್ಬರಿಗೂ ಅರ್ಧರ್ಧ ಅಂಗಿ, ಇವನು ಹರಕಲು ಬನಿಯನ್‌ನ ಕಮಂಗಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
- ರಾಜಕೀಯ ನಾಯಕರ ಬಲ ಹಣವೋ, ಜನವೋ?

ಎರಡೂ ಅಲ್ಲ, ಹಣಕ್ಕಾಗಿ ಮತ ಮಾರಿಕೊಳ್ಳುವವರ ಮೊದ್ದುತನ.

## ಬಹುಮಾನಿತ ಪ್ರಶ್ನೆ

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
'ದಂಡನಾಯಕ'ದಲ್ಲಿ 'ದಂಡ' ಎಂಬ ನಕಾರಾತ್ಮಕ ಪದ ಅವನ ಕೆಲಸಕ್ಕೆ ತಪ್ಪಲ್ಲವೆ?

ಹೀಗೆ ನೋಡಿ 'ದಂಡ' ಎಂದರೆ Fine; ನಾಯಕ ಎಂದರೆ Leader. ದಂಡನಾಯಕ Is a 'Fine leader'!

ಶ್ರೀನಿವಾಸ ಪದಕಿ, ಮುಂಬಯಿ
- ಬೈ ಒನ್ ಗೆಟ್ ಒನ್ ಫ್ರೀ ಎಂಬುದು ಮದುವೆಗೂ ಅನ್ವಯವಾದರೆ ಏನಾಗುತ್ತೆ ರಾಂ?

ಓಹ್! ಅಂದಿನ ಪಾಂಡವನೇ ಇಂದಿನ ಪದಕಿಯಾಗಿ ಮುಂಬಯಿಗೆ ಬಂದಿರುವುದೇನು? ವೆಲ್‌ಕಮ್ ಬ್ಯಾಕ್ ಪಾರ್ಥ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
- ವೇದಕ್ಕೂ ವಿಜ್ಞಾನಕ್ಕೂ ಇರುವ ವ್ಯತ್ಯಾಸವೇನು?

ನಾಲಿಗೆ ಹೊರಳಿದರೆ ವೇದ; ಬುದ್ಧಿ ಹೊರಳಿದರೆ ವಿಜ್ಞಾನ.

ಕೆ.ಎಂ. ವಿಭೂತಿ, ಹರಿಹರ
- ಸಂತೂರ್ ಸೋಪ್ ಕೊಂಡರೆ ಚಮಚ ಉಚಿತ ಕೊಡುವುದರ ಹಿಂದಿನ ರಹಸ್ಯವೇನು ಬೇತಾಳ ಪ್ರಭುವೆ?




ಖನ್ನಡ ಮೇಷ್ಟ್ರೊಬ್ಬ ಸೋಪನ್ನು ಸೂಪ್ ಎಂದು ಓದಿದನಂತೆ; ಆಡ್ ಏಜೆನ್ಸಿಯವ ಸೂಪಿಗೆ ಸ್ಪೂನ್ ಸೂಕ್ತ ಎಂದನಂತೆ.

ಎನ್. ಗೋಪಾಲರಾವ್, ಬೆಂಗಳೂರು
- ಒಂದೇ ದಿನ ನಾಮಕರಣ, ಸೀಮಂತ, ವಿವಾಹ, ತಿಥಿ, ವೈಕುಂಠಗಳಿಗೆ ಆಹ್ವಾನ ಬಂದರೆ ಯಾವುದಕ್ಕೆ ಹಾಜರಾಗಬೇಕು?

ತಿಥಿಗೇ .ಅಲ್ಲೊಂದೇ ಕಡೆ ನಿಮಗೇ ಉಡುಗೊರೆ ದೊರಕುವ ಸಾಧ್ಯತೆ ಇರುವುದು.

■ ರಾಮ್